# ಭಾವಮುಖ ಎಂದರೇನು?

ಸ್ವಾಮಿ ಹೃದಾನಂದ



ಭಾವಮುಖ ಎಂದರೇನು?

ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳಲ್ಲಿ ಹಳೆಯ ಮತ್ತು ಹೊಸದರ ಬೆಸುಗೆ ಕಂಡುಬರುತ್ತದೆ. ಅನೇಕ ಆದರ್ಶಗಳ ಸಮನ್ವಯ ಅವರ ವೈಶಿಷ್ಟ್ಯ. ಅವರ ಆಧ್ಯಾತ್ಮಿಕ ಅನುಭವಗಳ ನವೀನತೆಯನ್ನು ಎತ್ತಿತೋರಿಸುವ ಒಂದು ಶಬ್ದವೆಂದರೆ 'ಭಾವ ಮುಖ' ಎಂಬುದು. ಸಂಸ್ಕೃತದ ಶಾಸ್ತ್ರಗಳಲ್ಲಿ ಕಂಡುಬರದ ಈ ಅನುಭವವೇ ಅವರ ಸಾಧನೆಗಳ ನಂತರದ ಜೀವನಕ್ಕೆ ನಾಂದಿ ಯಾಗಿತ್ತು. ನಿರ್ವಿಕಲ್ಪ ಸಮಾಧಿಯಲ್ಲಿ ಆರು ತಿಂಗಳು ಇದ್ದ ನಂತರ 'ನೀನು ಇನ್ನು ಭಾವಮುಖದಲ್ಲಿರು' ಎಂದು ಜಗನ್ಮಾತೆ ಅವರಿಗೆ ಆದೇಶವಿತ್ತಳು. ಆಕೆಯ ಆದೇಶದ ಮೇರೆಗೆ ಭಾವ ಮುಖದಲ್ಲಿದ್ದು ಅವರು ಅದ್ಭುತ ಲೋಕಕಲ್ಯಾಣದ ಕಾರ್ಯಗಳನ್ನು ಸಾಧಿಸಿದರು; ತಮ್ಮ ಅಪಾರ ಕರುಣೆಯಿಂದ ಇಡೀ ಜಗತ್ತಿಗೇ ಬೆಳಕನ್ನು ಕೊಟ್ಟರು. ಅವರ ಈ ಕರುಣೆ ಮತ್ತು ಪ್ರೇಮಗಳ ಕಾರಣದಿಂದಲೇ ನಾವು-ನೀವು ಅವರ ದಿವ್ಯ ವಲಯದೊಳಗೆ ಬಂದು, ಇಂದು ಅವರನ್ನು ಕಿಂಚಿತ್ತಾದರೂ ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಈ 'ಭಾವಮುಖ' ಎಂದರೇನು? ಇದ ರೊಂದಿಗೇ ಸೇರಿರುವ ಇನ್ನೊಂದು ಶಬ್ದವಾದ 'ವಿಜ್ಞಾನಿ' ಎಂಬು ದರ ಅರ್ಥವೇನು? ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಅನುಭವಗಳ ಆಧಾರದ ಮೇಲೆ ಇವುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಶ್ರೀರಾಮಕೃಷ್ಣರು ದಿವ್ಯತೆ ಮತ್ತು ಮಾನವತೆಗಳ ನಡುವಣ ಸೇತುವೆ ಯಂತಿದ್ದರು. ದಿವ್ಯಭಾವ ಮತ್ತು ಮಾನುಷಭಾವಗಳೆರಡರಲ್ಲೂ ಅವರ ಮನಸ್ಸು ಸರಾಗವಾಗಿ ಓಲಾಡುತ್ತಿತ್ತು. ಇಂತಹ ಅದ್ಭುತ ಭಾವಮುಖದ ಸ್ಥಿತಿಯನ್ನು ವಿವರಿಸಿರುವ ಸ್ವಾಮೀಜಿಯವರು ಬೆಂಗಳೂರಿನ ಹತ್ತಿರದ ಶಿವನಹಳ್ಳಿಯ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ಲೇಖಕರು ಮತ್ತು ಭಾಷಣಕಾರರು.

ನಿರ್ವಿಕಲ್ಪ ಸಮಾಧಿ

ಕ್ಷುದ್ರ ಅಹಂಕಾರದಿಂದ ಸಂಸಾರದ ಬಂಧನದಲ್ಲಿ ಸಿಕ್ಕಿ ಜನ್ಮಾಂತರಗಳನ್ನು ಪಡೆದು, ಜೀವಿಯು ಬಹಳ ಸುಖದು:ಖ ಗಳನ್ನು ಅನುಭವಿಸುತ್ತಾನೆ. ಅನಂತರ, ಇವುಗಳಿಂದ ಬಿಡುಗಡೆ ಹೊಂದಲು ಪ್ರಯತ್ನಿಸುತ್ತಾನೆ. ಆಧ್ಯಾತ್ಮಿಕ ಸಾಧನೆಯ ಚರಮ ಗುರಿಯಾದ ನಿರ್ವಿಕಲ್ಪ ಸಮಾಧಿಯ ಮೂಲಕ ಪರಬ್ರಹ್ಮನ ಅನುಭೂತಿಯಾಗದ ಹೊರತು ಅವನಿಗೆ ಸಂಸಾರದಿಂದ ಮುಕ್ತಿಯಿಲ್ಲ. ನಿರ್ವಿಕಲ್ಪ ಸಮಾಧಿಯಲ್ಲಿ ಜೀವಿಯ ಎಲ್ಲ ಕರ್ಮಗಳೂ ನಾಶವಾಗಿ, 'ಏಕಮೇವಾದ್ವಿತೀಯಮ್' – ಎಲ್ಲವೂ ಒಂದೇ ಎಂಬ ಅನುಭವ ಉಂಟಾಗುತ್ತದೆ. ನಿರಾಕಾರ ನಿರ್ಗುಣ ಪರಬ್ರಹ್ಮನಲ್ಲಿ ಸಗುಣ ಸಾಕಾರ ಈಶ್ವರ ಮತ್ತು ಅವನ ಸೃಷ್ಟಿಯೂ ಕೂಡ ಲೀನವಾಗಿ ಹೋಗುತ್ತದೆಂದು ಅದ್ವೈತ ವೇದಾಂತ ಹೇಳುತ್ತದೆ. ಈ ಸಮಾಧಿಯ ನಂತರ ಏನಾಗುತ್ತದೆ? ಕೆಲವು ಸಾಧಕರು ಸಮಾಧಿಸ್ಥಿತಿಯಿಂದ ಪುನಃ ದೇಹಭಾವಕ್ಕೆ ಹಿಂತಿ ರುಗುವುದಿಲ್ಲ, ಕೆಲವರು ಹಿಂತಿರುಗುತ್ತಾರೆ.

ಸಾಧಾರಣ ನಿಯಮದಂತೆ ನಿರ್ವಿಕಲ್ಪ ಸಮಾಧಿಯಲ್ಲಿ ಅಹಂಕಾರ ಸಂಪೂರ್ಣ ನಾಶವಾಗುವುದರಿಂದ ಮತ್ತೆ ದೇಹ ಧಾರಣೆಗೆ ಅವಕಾಶವೇ ಇಲ್ಲ. ಆದ್ದರಿಂದ ಇಪ್ಪತ್ತೊಂದು ದಿನ ಗಳಲ್ಲಿ ದೇಹತ್ಯಾಗವಾಗಿ ಜೀವಿಯು ಬ್ರಹ್ಮನಲ್ಲಿ ಐಕ್ಯವಾಗುತ್ತಾನೆ.

ಜೀವನ್ಮುಕ್ತ

ಆದರೆ ಕೆಲವೊಮ್ಮೆ ನಿರ್ವಿಕಲ್ಪ ಸಮಾಧಿಯ ನಂತರವೂ ಸಾಧಕ ದೇಹಕ್ಕೆ ಹಿಂತಿರುಗುವುದುಂಟು. ಇದಕ್ಕೆ ಕಾರಣ ಏನು? ಪ್ರಾರಬ್ಧ ಕರ್ಮವೇ ಇದಕ್ಕೆ ಕಾರಣ ಎನ್ನುತ್ತದೆ ಅದ್ವೈತ ವೇದಾಂತ. ಇಲ್ಲಿ ಸಂಚಿತ ಕರ್ಮ, ಆಗಾಮಿ ಕರ್ಮಗಳು ನಾಶವಾದರೂ ಪ್ರಾರಬ್ಧ ಕರ್ಮ ನಾಶವಾಗುವುದಿಲ್ಲ. ಅದನ್ನು ಅನುಭವಿಸಿಯೇ ಕಳೆಯಬೇಕು. ಯಾವ ರೀತಿ ಬಿಲ್ಲಿಗೆ ಬಾಣ ಹೂಡಿ ಬಿಟ್ಟರೆ ಅದು ತನ್ನ ಗುರಿಯನ್ನು ತಲುಪುವ ತನಕ ನಿಲ್ಲುವುದಿಲ್ಲವೋ ಅದೇ ರೀತಿ, ಕೆಲವೊಮ್ಮೆ ಸಾಧಕನ ಪ್ರಾರಬ್ಧ ಮುಂದುವರಿಯುತ್ತದೆ. ದೇಹದಲ್ಲಿ ಮುಂದುವರಿದರೂ ಆತ ಮುಕ್ತನೇ. ಆದ್ದರಿಂದಲೇ

ಆತನನ್ನು 'ಜೀವನ್ಮುಕ್ತ' ಎಂದು ಕರೆಯುತ್ತಾರೆ. ಆತನಿಗೆ ಈ ಜಗತ್ತು ಹಗ್ಗದಲ್ಲಿ ಸರ್ಪ ಕಾಣದಂತೆ ಬರೀ ಭ್ರಮೆ ಮಾತ್ರ. ಇಲ್ಲಿ ಒಂದು ಪ್ರಶ್ನೆ ಉಂಟಾಗುತ್ತದೆ. ನಿರ್ವಿಕಲ್ಪ ಸಮಾಧಿಯಲ್ಲಿ, ನಿರಾಕಾರ ನಿರ್ಗುಣ ಪರಬ್ರಹ್ಮನೊಬ್ಬನೇ ಇರುವನೆಂಬ ಅದ್ವಿತೀಯ ಅನುಭವದಲ್ಲಿ, ಎಲ್ಲವೂ ಲೀನವಾಗಿ ಹೋಗುತ್ತದೆಂಬುದು ಸುಳ್ಳಾಯಿತಲ್ಲ? ಇದಕ್ಕೆ ಅದ್ವೈತವಾದಿಗಳ ಬಳಿ ಯಾವ ಉತ್ತರವೂ ಇಲ್ಲ.

### ಆಧಿಕಾರಿಕ ಪುರುಷ ಮತ್ತು ಅವತಾರ ಪುರುಷ

ಶ್ರೀರಾಮಕೃಷ್ಣರು ಇದಕ್ಕೆ ಹೀಗೆ ಉತ್ತರ ಕೊಡುತ್ತಾರೆ: ಸಗುಣ ಸಾಕಾರ ಪರಬ್ರಹ್ಮನ ಲೀಲೆ ಈ ಜಗತ್ತು. ಜಗನ್ಮಾತೆ ಕಾಳಿಯೇ ಸಗುಣ ಸಾಕಾರ ಬ್ರಹ್ಮ. ಮತ್ತೆ ಆಕೆಯೇ ನಿರಾಕಾರ, ನಿರ್ಗುಣ ಪರಬ್ರಹ್ಮಳೂ ಹೌದು. ಅವಳೇ ಸಾಧಕನಿಗೆ ನಿರ್ವಿಕಲ್ಪ ಸಮಾಧಿಯಲ್ಲಿ ತನ್ನ ಸಗುಣ ಸಾಕಾರ ರೂಪವನ್ನು ಮರೆಮಾಚಿ, ನಿರಾಕಾರಳಾಗುತ್ತಾಳೆ. ಸಾಧಾರಣ ನಿಯಮದಂತೆ ಸಾಧಕರಿಗೆ ನಿರ್ವಿಕಲ್ಪ ಸಮಾಧಿಯಲ್ಲಿ ಮುಕ್ತಿಯನ್ನು ಕೊಟ್ಟಬಳಿಕ ಅವಳು ಅವರನ್ನು ದೇಹಕ್ಕೆ ಹಿಂತಿರುಗಿಸುವುದಿಲ್ಲ. ಆದರೆ ಕೆಲವರನ್ನು ವಿಶೇಷ ಕಾರಣದಿಂದ ಆವಶ್ಯಕತೆಯಿದ್ದಲ್ಲಿ ಮಾತ್ರ ನಿರ್ವಿಕಲ್ಪ ಸಮಾಧಿಯಿಂದ ಮತ್ತೆ ಜಗತ್ತಿಗೆ ಹಿಂತಿರುಗಿಸುತ್ತಾಳೆ. ಆ ರೀತಿ ಬರುವಂತಹವರೇ **ಆಧಿಕಾರಿಕ ಪುರುಷರು** ಮತ್ತು **ಅವತಾರಪುರುಷರು.** ಲೋಕಕಲ್ಯಾಣಕ್ಕಾಗಿಯೇ ಅವರ ಬದುಕು ಮೀಸಲು. ಇಡೀ ಜಗತ್ತು ಅವರಿಂದ ಆಧ್ಯಾತ್ಮಿಕ ಬೆಳಕನ್ನು ಪಡೆಯುತ್ತದೆ. ಸೃಷ್ಟಿಯ ದು:ಖತಪ್ತ ಜೀವಿಗಳ ಬಗ್ಗೆ ಇರುವ ತನ್ನ ಮೈತ್ರಿ ಮತ್ತು ಕರುಣೆಗಳನ್ನು ಜಗನ್ಮಾತೆ ಇವರ ಮೂಲಕ ವ್ಯಕ್ತಗೊಳಿಸುತ್ತಾಳೆ. ಆಕೆಯ ಇಚ್ಛೆಯೇ ಅವರ ಇಚ್ಛೆಯಾಗಿರುತ್ತದೆ. ಜಗನ್ಮಾತೆಯ ಸಗುಣ ಮತ್ತು ನಿರ್ಗುಣ ಅವಸ್ಥೆಗಳು ಒಟ್ಟಿಗೆ ಜೊತೆಗಿರುವ ಅನುಭವ ಈ ಮಹಾನ್ ವ್ಯಕ್ತಿಗಳಿಗೆ ಆಗುತ್ತದೆ. ಅಂದರೆ, ಅವರ ಮನಸ್ಸು 'ಭಾವಮುಖ' ದಲ್ಲಿರುತ್ತದೆ.

### ಭಾವಮುಖ ಎಂದರೇನು?

"ನಿರ್ಗುಣ ಮತ್ತು ಸಗುಣಗಳ ಮಧ್ಯದಲ್ಲಿ ಯಾವ ಈ ವಿಶ್ವ ಅಹಂ ತತ್ತ್ವವಿದೆಯೋ ಅದೇ 'ಭಾವಮುಖ.' ಏಕೆಂದರೆ ಇದು ಇರುವುದರಿಂದಲೇ ವಿಶ್ವ ಮನಸ್ಸಿನಲ್ಲಿ ಅನಂತ ಭಾವಗಳು ಸ್ಫುರಿಸುತ್ತಿರುವುದು. ಈ ವಿಶ್ವ ಅಹಂತತ್ತ್ವವೇ ಜಗನ್ಮಾತೆಯ ಅಥವಾ ಈಶ್ವರನ ಅಹಂಭಾವ. ಈ ವಿಶ್ವ ಅಹಂತತ್ತ್ವದ ಸ್ವರೂಪವನ್ನೇ ಗೌಡೀಯ ವೈಷ್ಣವರು, ಅಚಿಂತ್ಯಭೇದಾಭೇದ ಸ್ವರೂಪಿಯಾದ ಜ್ಯೋತಿರ್ಘನಮೂರ್ತಿಯಾದ ಭಗವಾನ್ ಶ್ರೀಕೃಷ್ಣ ಎಂದು ವರ್ಣಿಸುತ್ತಾರೆ." (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಪೂರ್ವಾರ್ಧ, ಪರಿಷ್ಕೃತ ಮುದ್ರಣ, ಪು. ೪೧೬, ೧೯೯೪)

ನಿರ್ಗುಣದಲ್ಲಿ ಬ್ರಹ್ಮ ನಿಷ್ಕ್ರಿಯ. ಸಗುಣದಲ್ಲಿ ಮಾತ್ರ ಆತನ ಶಕ್ತಿಯ ಅಭಿವ್ಯಕ್ತಿ. ಈ ಎರಡೂ ರೂಪದಲ್ಲಿರುವವನು ಒಬ್ಬನೇ. ಇದಕ್ಕೆ ಶ್ರೀರಾಮಕೃಷ್ಣರು ಕೊಡುವ ಉದಾಹರಣೆ ಹೀಗಿದೆ: ಹಾವು ಮೈ ಸುತ್ತಿ ಸುಮ್ಮನೆ ಕುಳಿತಿದ್ದರೂ ಹಾವೇ, ವಕ್ರಗತಿಯಲ್ಲಿ ಸರಿದಾಡುತ್ತಿದ್ದರೂ ಅದು ಹಾವೇ. ಅದೇ ರೀತಿ ನಿರ್ಗುಣದಲ್ಲಿ ನಿಷ್ಕ್ರಿಯತೆ ಮತ್ತು ಸಗುಣದ ಸೃಷ್ಟಿಯಲ್ಲಿ ಸಕ್ರಿಯತೆ – ಇವೆರಡೂ ಪರಬ್ರಹ್ಮನದೇ. ಇವೆರಡರ ಮಧ್ಯೆ ಇದೆ 'ಭಾವಮುಖ.' ಮನೆಯ ಹೊಸ್ತಿಲಲ್ಲಿ ಕುಳಿತರೆ ಮನೆಯ ಒಳಗೆ ಮತ್ತು ಮನೆಯ ಹೊರಗೆ– ಎರಡೂ ಕಡೆ ನೋಡಬಹುದು. ಭಾವಮುಖವೆಂದರೆ ನಿರ್ಗುಣ ಮತ್ತು ಸಗುಣಗಳ ಮಧ್ಯೆ ಇರುವ ಹೊಸ್ತಿಲು. ಇಲ್ಲಿದ್ದುಕೊಂಡು ಇಷ್ಟ ಬಂದಾಗ ನಿರ್ಗುಣದಲ್ಲಿ ಲೀನವಾಗಬಹುದು ಅಥವಾ ಈಶ್ವರನ ವಿಶ್ವಲೀಲೆಯಲ್ಲಿ ಭಾಗವಹಿಸಬಹುದು.

### ಪರಿವರ್ತಿತ ಅಹಂ

ನಿರ್ವಿಕಲ್ಪ ಸಮಾಧಿಯ ನಂತರ ಶ್ರೀರಾಮಕೃಷ್ಣರು ಭಗವತ್ ಕೇಂದ್ರಿತ ಅಹಂಕಾರವನ್ನು ಹೊಂದಿದರು. ಅವರ ಮನಸ್ಸು ಸಾಧಾರಣವಾಗಿಯೇ ನಿರಾಕಾರದ ಕಡೆಗೆ ಒಲಿದಿತ್ತು. ಆದುದರಿಂದ ಅವರ ಅಹಂಕಾರ ಮತ್ತೆ ಮತ್ತೆ ಸಮಾಧಿಯಲ್ಲಿ ಲೀನವಾಗಿ ಆ ಆನಂದದ ಸವಿಯನ್ನು ಉಣ್ಣುತ್ತಿತ್ತು. ಆದರೆ ಜಗನ್ಮಾತೆಯ ಕೆಲಸಕ್ಕಾಗಿ ಸಮಾಧಿಯಿಂದ ಅವರು ಇಳಿಯಲೇ ಬೇಕಾಗಿತ್ತು. ಅದಕ್ಕಾಗಿ ಅವರು ತಮ್ಮ ಮನಸ್ಸಿನ ಮೇಲೆ 'ನಾನು ನೀರು ಕುಡಿಯಬೇಕು' ಮುಂತಾದ ಬಯಕೆಗಳನ್ನು ಹೇರಿಕೊಳ್ಳುತ್ತಿದ್ದರು. ಸಮಾಧಿಯಿಂದ ಕೆಳಗಿಳಿದ ಅವರ ಮನಸ್ಸು ಜ್ಞಾನ ಅಥವಾ ಭಕ್ತಿ ಭಾವದಲ್ಲಿರುತ್ತಿತ್ತು. ಈ ಸ್ಥಿತಿಯಲ್ಲಿ ಯಾವ ಅಹಂಕಾರ ಅವರಲ್ಲಿತ್ತೋ ಅದು ಮಹಾ ಅಥವಾ ಪಕ್ವ ಅಹಂಕಾರದೊಡನೆ ಒಂದಾಗಿತ್ತು. ಒಮ್ಮೊಮ್ಮೆ ಅವರು ಭಾವಿಸುತ್ತಿದ್ದರು, ತಾನು ವಿಶ್ವ ಅಹಂಕಾರದ ಒಂದು ಅಂಗ ಅಥವಾ ಅಂಶ ಎಂದು; ಮತ್ತೆ ಕೆಲವೊಮ್ಮೆ ಆ ವಿಶ್ವ ಅಹಂತತ್ತ್ವದೊಡನೆ ಸಂಪೂರ್ಣ ಒಂದಾಗಿ ಬಿಡುತ್ತಿದ್ದರು (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಪೂರ್ವಾರ್ಧ, ಪರಿಷ್ಕೃತ ಮುದ್ರಣ, ಪು.೪೨೦, ೧೯೯೪).

ಭಕ್ತಾಗ್ರಣಿ ಹನುಮಂತ ಶ್ರೀರಾಮನಿಗೆ ಒಮ್ಮೆ ಹೇಳಿದ :

ದೇಹಬುದ್ಧ್ಯಾ ದಾಸೋಽಸ್ಮೀತಿ ಜೀವಬುದ್ಧ್ಯಾ ತ್ವದಂಶಕ: ।
ಆತ್ಮಬುದ್ಧ್ಯಾ ತ್ವಮೇವಾಹಮಿತಿ ಮೇ ನಿಶ್ಚಲಾ ಮತಿ: ॥

"ದೇಹಬುದ್ಧಿಯಲ್ಲಿದ್ದಾಗ ನಾನು ನಿನ್ನ ದಾಸ, ಜೀವಬುದ್ಧಿಯಿದ್ದಾಗ ನಾನು ನಿನ್ನ ಅಂಶ, ಆತ್ಮಬುದ್ಧಿಯಿದ್ದಾಗ ನಾನೇ ನೀನು, ನೀನೇ ನಾನು. ಇದು ನನ್ನ ಖಚಿತವಾದ ಅನುಭವ."

ಶ್ರೀರಾಮಕೃಷ್ಣರೂ ಹನುಮಂತನ ರೀತಿಯಲ್ಲಿ ಕೆಲವೊಮ್ಮೆ ಭಕ್ತನಂತೆ, ಕೆಲವೊಮ್ಮೆ ಜ್ಞಾನಿಯಂತೆ ಇರುತ್ತಿದ್ದರು. ಇನ್ನು ಕೆಲವೊಮ್ಮೆ ಪರಬ್ರಹ್ಮನಲ್ಲಿ ಒಂದಾಗಿಬಿಡುತ್ತಿದ್ದರು.

ವಿಜ್ಞಾನಿ

ಪ್ರಪಂಚವು ತೋರಿಕೆಗೆ ಮಾತ್ರ ಇದೆ, ಆದ್ದರಿಂದ ಅದು ಅಸತ್ಯ ಎಂದು ಅದನ್ನು ನಿರಾಕರಿಸುವುದೇ ಜ್ಞಾನ. ವಿಜ್ಞಾನ ಎಂದರೆ ಪ್ರಪಂಚದ ಬಗ್ಗೆ ಭಾವಮುಖದಲ್ಲಿರುವ ಮಹಾಪುರುಷನ ದೃಷ್ಟಿ. ಜಗತ್ತು ಅಸತ್ಯವಲ್ಲ, ಅದು ಪರಬ್ರಹ್ಮನ ಲೀಲಾ ಅಭಿವ್ಯಕ್ತಿ ಎಂದು ಆತ ನೋಡುತ್ತಾನೆ. ನಿತ್ಯವು ಯಾರದ್ದೋ ಲೀಲೆಯೂ ಅವನದೇ. ಒಂದೊಂದಾಗಿ ಮೆಟ್ಟಿಲನ್ನು ಹತ್ತಿ ತಾರಸಿಗೆ ತಲುಪಿದ ಮನುಷ್ಯ ನೋಡುತ್ತಾನೆ, ಯಾವ ವಸ್ತುವಿನಿಂದ ತಾರಸಿ ಮಾಡಲ್ಪಟ್ಟಿದೆಯೋ ಅದೇ ವಸ್ತುವಿನಿಂದ ಮೆಟ್ಟಿಲುಗಳೂ ಮಾಡಲ್ಪಟ್ಟಿವೆ. ಅದರಂತೆ ಜಗತ್ತನ್ನು ನಿರಾಕರಿಸಿ ನಿರ್ವಿಕಲ್ಪ ಸಮಾಧಿಗೇರಿದ ವ್ಯಕ್ತಿ ಮತ್ತೆ ಹಿಂತಿರುಗಿ ಬಂದರೆ ಎಲ್ಲವೂ ಭಗವಂತನೇ ಆಗಿರುವುದನ್ನು ಕಾಣುತ್ತಾನೆ. ಅವನೇ ವಿಜ್ಞಾನಿ.

ಭಾವಮುಖದಲ್ಲಿ ಲೋಕಕಲ್ಯಾಣ

ಭಾವಮುಖದಲ್ಲಿ ಶ್ರೀರಾಮಕೃಷ್ಣರು ವಿಶ್ವಮನಸ್ಸಿನೊಂದಿಗೆ ಒಂದಾಗುತ್ತಿದ್ದರು. ಆಗ ಅವರಿಗೆ ಪ್ರತಿಯೊಂದು ವಸ್ತು ಅಥವಾ ವ್ಯಕ್ತಿ ವಿಶ್ವಮನಸ್ಸಿನಲ್ಲಿ ಉದ್ಭವಿಸುವ ಒಂದೊಂದು ಭಾವತರಂಗದಂತೆ ಕಂಡುಬರುತ್ತಿತ್ತು. ತಮ್ಮ ಶರೀರ, ಮನಸ್ಸು, ಅಹಂಬೋಧೆಯೂ ಕೂಡ ಈ ವಿಶ್ವ ಮನಸ್ಸಿನ ತರಂಗಗಳೆಂದು ಅವರಿಗೆ ಅನುಭವ ವಾಗುತ್ತಿತ್ತು. ಇದರಿಂದ ಶಕ್ತಿಯ ಸ್ವರೂಪವು ಪ್ರತ್ಯಕ್ಷವಾಗಿ ಅವರ ಅರಿವಿಗೆ ಬರುತ್ತಿತ್ತು. ಈ ವಿಶ್ವಶಕ್ತಿಯನ್ನೇ ಅವರು ಕರುಣಾ ಮಯಿ, ಬ್ರಹ್ಮಮಯಿ ಜಗನ್ಮಾತೆ ಎಂದು ಹೇಳುತ್ತಿದ್ದರು. ಈ ಸ್ಥಿತಿಯಲ್ಲಿ ಎಲ್ಲರ ಮನಸ್ಸಿನ ಎಲ್ಲ ಭಾವಗಳ ಪರಿಚಯ ಅವರಿ ಗಾಗುತ್ತಿತ್ತು. ಜೇಡ ತನ್ನ ಬಲೆಯೊಳಗೆ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಲೀಲಾಜಾಲವಾಗಿ ಹೋಗುವಂತೆ, ಅವರು ವಿಶ್ವ 'ಅಹಂ' ನೊಂದಿಗೆ ಒಂದಾಗಿ, ಯಾರ ಮನಸ್ಸನ್ನಾದರೂ ಸಹಜವಾಗಿ ಅರಿಯಬಲ್ಲವರಾಗಿದ್ದರು. ಅವರು ಹೇಳುತ್ತಿದ್ದರು: "ಮನುಷ್ಯನೊಳಗೆ ಏನಿದೆಯೋ ಅದನ್ನೆಲ್ಲ ನಾನು ನೋಡುತ್ತೇನೆ. ಗಾಜಿನ ಬೀರುವಿನಲ್ಲಿ ಇರುವ ವಸ್ತುಗಳೆಲ್ಲ ಕಾಣುವಂತೆ ಮನುಷ್ಯರ ಒಳಗಿರುವುದೆಲ್ಲ ನನಗೆ ಕಾಣುತ್ತದೆ." ಹೀಗಾಗಿ ಅವರ ಬಳಿ ಬಂದ ಪ್ರತಿಯೊಬ್ಬರ ಜನ್ಮಜನ್ಮಾಂತರದ ಸಂಸ್ಕಾರ ಗಳ ಅರಿವು ಅವರಿಗಾಗುತ್ತಿತ್ತು. ಆ ಪ್ರಕಾರ ಅವರ ಉನ್ನತಿಗಾಗಿ ವೈಯಕ್ತಿಕವಾದ ಉಪದೇಶವನ್ನು ಶ್ರೀರಾಮಕೃಷ್ಣರು ನೀಡುತ್ತಿದ್ದರು; ಅಂಧಕಾರದಲ್ಲಿರುವವರಿಗೆ ಬೆಳಕನ್ನೂ, ನಿರಾಶೆಯಿಂದ ಬಳಲು ವವರಿಗೆ ಆಶಾಕಿರಣವನ್ನೂ, ಸಂಸಾರದ ದು:ಖದಿಂದ ಬೆಂದು ಬಳಲುತ್ತಿರುವವರಿಗೆ ಪರಮ ಶಾಂತಿಯನ್ನೂ ನೀಡುತ್ತಿದ್ದರು.

ಇದೇ ಅವಸ್ಥೆಯಲ್ಲಿ ಶ್ರೀರಾಮಕೃಷ್ಣರು ಭಕ್ತರಿಗೆ ಆಧ್ಯಾತ್ಮಿಕ ಶಕ್ತಿಯನ್ನೂ ಕರುಣಿಸುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವು ದಾದರೆ ಅವರು ಕಲ್ಪತರುವಿನಂತಾಗುತ್ತಿದ್ದರು. ಭಕ್ತರು ಏನು ಬೇಕಾದರೂ ಕೇಳಲಿ, ಯೋಗ್ಯಾಯೋಗ್ಯತೆಯ ಪ್ರಶ್ನೆಯೆತ್ತದೆ 'ಈಗಲೇ ಕೊಡುತ್ತೇನೆ' ಅನ್ನುವ ಭಾವದಲ್ಲಿರುತ್ತಿದ್ದರು. ಶುದ್ಧಚರಿತ್ರ ರಾದ ನರೇಂದ್ರಾದಿಗಳಿಂದ ಹಿಡಿದು ಅನೇಕ ಪಾಪಗಳನ್ನು ಮಾಡಿದ ಗಿರೀಶ್ ಘೋಷ್, ಕಾಳೀಪದ ಮುಂತಾದವರೆಲ್ಲರನ್ನೂ ಅವರು ಕರುಣಿಸಿದ್ದು ಈ ಭಾವದಲ್ಲಿಯೇ. ಜನವರಿ ೧೮೮೬ ರ ಒಂದನೇ ತಾರೀಖು ಈ ಭಾವದ ವಿಶೇಷ ಪ್ರಕಾಶ ಅವರಲ್ಲಿ ಆಯಿತು. ಕಾಶೀಪುರ ಉದ್ಯಾನವನದಲ್ಲಿ ಉಪಸ್ಥಿತರಿದ್ದ ಎಲ್ಲ ಭಕ್ತರನ್ನು ಸ್ಪರ್ಶಿಸಿ ಆಧ್ಯಾತ್ಮಿಕ ಶಕ್ತಿ ಸಂಚಾರವಾಗುವಂತೆ ಮಾಡಿದ ಈ ದಿನವನ್ನು ಪ್ರತಿವರ್ಷವೂ ರಾಮಕೃಷ್ಣ ಮಹಾಸಂಘದಲ್ಲಿ 'ಕಲ್ಪತರು ದಿನ' ವೆಂದೇ ಆಚರಿಸಲಾಗುತ್ತಿದೆ.

ಜಗತ್ತಿನ ಪ್ರತಿಯೊಂದು ಜೀವಿಯ ಬಗ್ಗೆಯೂ ಶ್ರೀರಾಮ ಕೃಷ್ಣರು ಸಮಾನವಾದ ಭಾವವನ್ನಿಟ್ಟುಕೊಂಡಿದ್ದರು. ಅಜ್ಞಾನದ ಅಂಧಕಾರದಲ್ಲಿ ಬಳಲುತ್ತಿರುವ ಜೀವಿಗಳನ್ನು ಕಂಡು ಪರಿತಪಿಸು ತ್ತಿದ್ದರು. ಅವರ ಕರ್ಮಭಾರವನ್ನು ತಾವೇ ಹೊತ್ತುಕೊಂಡು, ಯಾತನೆಯನ್ನು ಅನುಭವಿಸಿದರು; ಜೀವಗಳ ಉದ್ಧಾರಕ್ಕಾಗಿ ಮುಂದೆ ಕೂಡ ಮತ್ತೆ ಹುಟ್ಟಿಬರುವುದಾಗಿ ಹೇಳುತ್ತಿದ್ದರು.

ಉಪಸಂಹಾರ

"ಶ್ರೀಜಗನ್ಮಾತೆಯ ನಿರ್ಗುಣ-ಸಗುಣಗಳಿಂದ ಕೂಡಿದ ಸ್ವರೂಪವನ್ನು ಪೂರ್ಣ ಅನುಭವಿಸಿದ ಮೇಲೆ ಶ್ರೀರಾಮಕೃಷ್ಣರು 'ಭಾವಮುಖದಲ್ಲಿರು' ಎಂಬ ಆದೇಶವನ್ನು ಪಡೆದರು. ಅಂದರೆ, ಅಹಂಭಾವವನ್ನು ಸಂಪೂರ್ಣ ಲಯಗೊಳಿಸಿ ನಿರ್ಗುಣದಲ್ಲಿ ಇರಬೇಡ, ಯಾವುದರಿಂದ ಅನಂತ ವಿಶ್ವಭಾವಗಳು ಉಂಟಾಗು ತ್ತಿವೆಯೋ ಆ ವಿಶ್ವ-ಅಹಂ ನೀನಾಗಿರುವೆ. ಅದರ ಇಚ್ಛೆಯೇ ನಿನ್ನ ಇಚ್ಛೆ, ಅದರ ಕಾರ್ಯವೇ ನಿನ್ನ ಕಾರ್ಯ- ಈ ಭಾವವನ್ನು ಯಾವಾಗಲೂ ಸರಿಯಾದ ರೀತಿಯಲ್ಲಿ ಅನುಭವಿಸುತ್ತ ಜೀವನ ಯಾಪನೆ ಮಾಡು ಮತ್ತು ಲೋಕಕಲ್ಯಾಣವನ್ನು ಸಾಧಿಸು" (ಶ್ರೀರಾಮಕೃಷ್ಣ ಲೀಲಾಪ್ರಸಂಗ, ಪೂರ್ವಾರ್ಧ, ಪರಿಷ್ಕೃತ ಮುದ್ರಣ, ಪು. ೪೦೬, ೧೯೯೪).

ನಿರ್ವಿಕಲ್ಪ ಸಮಾಧಿಯ ನಂತರ ಭಾವಮುಖದಲ್ಲಿದ್ದ ಶ್ರೀರಾಮಕೃಷ್ಣರು ಜೀವಿಗಳ ಬಗ್ಗೆ ಅಪಾರ ಕರುಣೆ, ವಾತ್ಸಲ್ಯ, ಪ್ರೇಮ, ಕೃಪೆಗಳನ್ನು ಸ್ಥೂಲಶರೀರದ ಮೂಲಕ ತೋರಿಸಿದರು. ಸೂಕ್ಷ್ಮಶರೀರದಲ್ಲಿ ಈಗಲೂ ಅವರಿದ್ದಾರೆಂದು ಸ್ವಾಮಿ ವಿವೇಕಾ ನಂದರು ಹೇಳುತ್ತಾರೆ. ಈಗಲೂ ಅವರು ನಮ್ಮೆಡೆಗೆ ಅಷ್ಟೇ ಕಾತರರಾಗಿದ್ದಾರೆ. ಭಾಗ್ಯವಂತರಿಗೆ ಅವರು ಕಾಣಿಸಿಕೊಳ್ಳುತ್ತಾರೆ. ಶ್ರೀರಾಮಕೃಷ್ಣ ಮಹಾಸಂಘ ಮತ್ತು ಅದರ ಭಕ್ತವಲಯದಲ್ಲಿ ಅವರ ಅದ್ಭುತ ಲೀಲೆ ನಿತ್ಯ ನಡೆಯುತ್ತಿದೆ. ಜಗತ್ತಿನ ತಾಪತ್ರಯ ಗಳಿಗೆ ಸಿಲುಕಿ ನೊಂದ, ಬೆಂದ ಜೀವಿಗಳಿಗೆ ಅಭಯ ಕೊಡುವುದ ಕ್ಕಾಗಿ 'ಭಾವಮುಖಿ' ಶ್ರೀರಾಮಕೃಷ್ಣರು ತಮ್ಮ ಭಾವಸಮಾಧಿಯ ಚಿತ್ರದಲ್ಲಿ ಕುಳಿತಿದ್ದಾರೆ. ಅವರ ಪಾದದಡಿಗೆ ಬಂದು, ಅನುಗ್ರಹಕ್ಕೆ ಪಾತ್ರರಾದವರು ಮಹಾ ಪುಣ್ಯವಂತರೇ ಸರಿ.